# PODAR INTERNATIONAL SCHOOL - SHIMOGA

## PARENTS PRIDE

### Mrs. Gowri Badri - Parent of Varenya T. Badri (Grade 1)

Mrs Badri has been awarded as "Women Achiever 2012" on 8th March 2012 at Hotel Lalit Ashok, Bangalore. The award is constituted by Federation of Karnataka Chamber of Commerce and Industry. It is given to emerging women entrepreneurs of Karnataka. Mr. Murugesh Nirani, Honourable Minister for Industries- Govt. of Karnataka has bestowed this award on her. Mrs. Badri is appreciated for her initiatives to use latest technology in Garments Industry.








ಶಿವಮೊಗ್ಗ: ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ವತಿಯಿಂದ ಸಂಘದ ಉದ್ಯಮ ರಂಗದಲ್ಲಿ ಗಣನೀಯ ಸಾಧನೆಗೈದ ನಗರದ ಯುವ ಮಹಿಳಾ ಉದ್ಯಮಿ ಗೌರಿ ಬದರಿಯವರನ್ನು ಸನ್ಮಾನಿಸಲಾಯಿತು. ಸಂಘದ ಅಧ್ಯಕ್ಷ ಟಿ.ಆರ್. ಅಶ್ವತ್ಥ ನಾರಾಯಣ ಶೆಟ್ಟಿ, ಎಸ್.ಎಸ್. ರಂಗರಾಜನ್, ಡಿ.ಎಸ್. ನಟರಾಜ್, ಎಂ.ಜಿ. ರಾಮಚಂದ್ರ ಮೂರ್ತಿ, ಎಂ.ಹಾಲಪ್ಪ, ಉಮೇಶ್ ಆರಾಧ್ಯ, ಕೆ.ವಿ.ವಸಂತ ಕುಮಾರ್ ಉಪಸ್ಥಿತರಿದ್ದರು.



**ಗೌರಿ ಬದರಿ ಯವರಿಗೆ ಪ್ರಶಸ್ತಿ ಪ್ರದಾನ**

ಶಿವಮೊಗ್ಗ ಮಾ.15: ಬೆಂಗಳೂರಿನ ರಾಜ್ಯ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಪ್ರತಿವರ್ಷ ಮಹಿಳಾ ದಿನಾಚರಣೆಯ ಅಂಗವಾಗಿ ರಾಜ್ಯ ಮಟ್ಟದಲ್ಲಿ ನೀಡುವ 'ಉದ್ಯಮದಲ್ಲಿ ಮಹಿಳಾ ಸಾಧನೆ' ಈ ಸಾಲಿನ ಪ್ರಶಸ್ತಿಯು ಶಿವಮೊಗ್ಗೆಯ ಗೌರಿ ಬದರಿ ರವರಿಗೆ ಲಭಿಸಿದೆ. ಮಾರ್ಚ್ 8 ರಂದು ಬೆಂಗಳೂರಿನಲ್ಲಿ ಕೈಗಾರಿಕಾ ಸಚಿವರಾದ ಮುರುಗೇಶ್ ನಿರಾಣಿ ಮತ್ತು ಮುಖ್ಯಮಂತ್ರಿಯವರ ಪತ್ನಿ ಡಾಟಿ ಸದಾನಂದ ಗೌಡ ಅವರ ಸಮ್ಮುಖದಲ್ಲಿ ಅಶೋಕ ಹೋಟೆಲ್ ನಲ್ಲಿ ನಡೆದ ಸಮಾರಂಭದಲ್ಲಿ ಈ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

ಗೌರಿಬದರಿಯವರು ಕಂಪ್ಯೂಟರೈಸ್ಡ್ ಎಂಬ್ರಾಯಿಡರಿ ಮತ್ತು ಸ್ಟಿಚಿಂಗ್ ಉದ್ಯಮವನ್ನು 1ನೇ ಮಹಡಿ, ಝೀನ್ ವಿಲ್ಲಾ, ವಿನೋಬನಗರ, ಶಿವಮೊಗ್ಗದಲ್ಲಿ ಸ್ಥಾಪಿಸಿ, ಸುಮಾರು 15 ಜನ ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸಿ ತಮ್ಮ ಘಟಕವನ್ನು ಯಶಸ್ವಿಯಾಗಿ ನಡೆಸುತ್ತಿದ್ದಾರೆ.

ಇವರು ರಾಷ್ಟ್ರೀಯ ಶಿಕ್ಷಣ ಸಂಸ್ಥೆಯ ಖಜಾಂಚಿ ಹಾಗೂ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷರೂ ಆದ ಟಿ.ಆರ್. ಅಶ್ವತ್ಥನಾರಾಯಣ್ ಶೆಟ್ಟಿ ಯವರ ಸೊಸೆ ಹಾಗೂ ಶ್ರೀನಿಧಿ ಸಿಲ್ಕ್ಸ್ ಅಂಡ್ ಟೆಕ್ಸ್‌ಟೈಲ್ಸ್ ನ ಪಾಲುದಾರ [illegible] ಬದರೀ ಪ್ರಸಾದ್ ರವರ ಪತ್ನಿಯವರಾಗಿದ್ದಾರೆ.




ಕರ್ನಾಟಕ ರಾಜ್ಯ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ವತಿಯಿಂದ ಮಹಿಳಾ ದಿನಾಚರಣೆ ಸಂದರ್ಭದಲ್ಲಿ ಉದ್ಯಮದಲ್ಲಿ ಮಹಿಳಾ ಸಾಧನೆಗಾಗಿ ನೀಡುವ ಪ್ರಶಸ್ತಿಯು ಶಿವಮೊಗ್ಗ ವಿನೋಬನಗರದ ಮಹಿಳಾ ಉದ್ಯಮಿ ಗೌರಿಬದರಿ ಅವರಿಗೆ ಲಭಿಸಿದ್ದು, ಬೆಂಗಳೂರಿನ ಅಶೋಕ ಹೋಟೆಲ್‌ನಲ್ಲಿ ಜರುಗಿದ ಸಮಾರಂಭದಲ್ಲಿ ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ ಹಾಗೂ ಮುಖ್ಯಮಂತ್ರಿಯವರ ಪತ್ನಿ ಶ್ರೀಮತಿ ಡಾಟಿ ಸದಾನಂದಗೌಡ ಪ್ರಶಸ್ತಿ ಪ್ರದಾನ ಮಾಡಿದರು. ಪ್ರಶಸ್ತಿಗೆ ಪಾತ್ರರಾದ ಗೌರಿ ಬದರಿಯವರು ಎನ್‌ಇಎಸ್ ಖಜಾಂಚಿ ಹಾಗೂ ಜಿಲ್ಲಾ ವಾಣಿಜ್ಯ ಸಂಘದ ಅಧ್ಯಕ್ಷರೂ ಆದ ಶ್ರೀನಿಧಿ ಸಿಲ್ಕ್ಸ್ ಅಂಡ್ ಟೆಕ್ಸ್‌ಟೈಲ್ಸ್‌ನ ಟಿ.ಆರ್. ಅಶ್ವತ್ಥನಾರಾಯಣ ಶೆಟ್ಟರ ಸೊಸೆ ಹಾಗೂ ಬದರಿಪ್ರಸಾದ್‌ರವರ ಧರ್ಮಪತ್ನಿ.



ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಕರ್ನಾಟಕ ರಾಜ್ಯ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ನೀಡುವ ಉದ್ಯಮದಲ್ಲಿ ಮಹಿಳಾ ಸಾಧನೆ ಪ್ರಶಸ್ತಿಗೆ ಪಾತ್ರರಾದ ಕಂಪ್ಯೂಟರೈಸ್ಡ್ ಎಂಬ್ರಾಯಿಡರಿ ಮತ್ತು ಸ್ಟಿಚ್ಚಿಂಗ್ ಉದ್ಯಮದಲ್ಲಿ ಹಲವಾರು ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸಿದ ಗೌರಿ ಬದರಿಯವರನ್ನು ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಘದಿಂದ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಶ್ರೀಮತಿ ಗೌರಿಯವರ ಪತಿ ಬದರಿ ಪ್ರಸಾದ್, ಸಂಘದ ಅಧ್ಯಕ್ಷ ಟಿ.ಆರ್. ಅಶ್ವತ್ಥನಾರಾಯಣ ಶೆಟ್ಟಿ ಹಾಗೂ ಇನ್ನಿತರ ಪದಾಧಿಕಾರಿಗಳು ಉಪಸ್ಥಿತರಿದ್ದರು.